ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿರಸ್ತೆ, ಮೈಸೂರು-೫೭೦ ೦೨೫
ESTD - 1964
☎ 0821-2548236 & 2548380 Fax: 0821-2548238 E-mail: jssautonomous@gmail.com

# ಪ್ರಕಟಣೆಯ ಕೃಪೆಗಾಗಿ

ದಿನಾಂಕ:೧೫-೦೮-೨೦೧೪

# ೬೮ನೇಸ್ವಾತಂತ್ರ್ಯ ದಿನಾಚರಣೆ ಆಚರಣೆ

ಮೈಸೂರು, ಆ.15: ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ ಮೈಸೂರಿನಲ್ಲಿ 68 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಜೆಎಸ್‌ಎಸ್ ಕಾಲೇಜು ಆವರಣದ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಧ್ವಜಾರೋಹಣ ಮಾಡಿದರು. ಸ್ಕೌಟ್ ಮತ್ತು ಎನ್‌ಸಿಸಿ ಕೆಡೆಟ್‌ಗಳ ಜೊತೆಗೆ ಉಪಸ್ಥಿತರಿದ್ದ ಗಣ್ಯರು, ಉಪನ್ಯಾಸಕರು, ವಿದ್ಯಾರ್ಥಿನಿಯರು ರಾಷ್ಟ್ರಗೀತೆ ಹಾಡಿ ನಮನ ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗುಬ್ಬಿಗೂಡು ರಮೇಶ್, ಉಪನ್ಯಾಸಕರು, ಸರ್ಕಾರಿ ಪಿಯು ಕಾಲೇಜು, ಮೈಸೂರು ಇವರು ಮಾತನಾಡಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪ್ರಾಣವನ್ನು ತೆತ್ತ ರಾಜ್‌ಗುರು, ಭಗತ್‌ಸಿಂಗ್ ಹಾಗೂ ಚಂದ್ರಶೇಖರ ಆಜಾದ್‌ರವರಂತಹ ಹುತ್ಮಾತ್ಮರನ್ನು ಮತ್ತು ಗಾಂಧಿತತ್ತ್ವವನ್ನು ನೆನೆಯುತ್ತಾ, ಇಂದಿನ ಯುವಕರಗೆ ದೇಶಭಿಮಾನದ ಮಹತ್ವ ತಿಳಿಸುತ್ತಾ ದೇಶಕಟ್ಟುವ ಮನೋಭಾವವನ್ನು ಬೆಳೆಸಿಕೊಳ್ಳಿ ಎಂದು 68ನೇ ಸ್ವಾತಂತ್ರ ದಿನಾಚರಣೆಯ ಸಂದರ್ಭದಲ್ಲಿ ತಿಳಿ ಹೇಳಿದರು. ಮಿತ್ರಸಂಮ್ಮಿತೆ ಮತ್ತು ಕಾಂತಸಂಮ್ಮಿತೆ ಮನೋಧರ್ಮದಿಂದ ದೇಶಸೇವೆಗೆ ಇಂದಿನ ಯುವಜನತೆಯನ್ನು ಸಿದ್ಧಪಡಿಸುವ ಅಗತ್ಯವಿದೆ ಎಂದು ತಿಳಿಸಿದರು. ರವೀದ್ರನಾಥ ಠಾಗೂರ್‌ರವರು ಬರೆದಂತಹ ರಾಷ್ಟ್ರಗೀತೆಯ ಪೂರ್ಣಪಾಠವನ್ನು ವಾಚಿಸಿದರು.

ಪ್ರಾಚಾರ್ಯರಾದ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್‌ರವರು ಸ್ವಾತಂತ್ರಕ್ಕಾಗಿ ಹೋರಾಡಿದ ನಾಮಧೇಯ ಅನಾಮಧೇಯರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಬೇಕಾದ ಸುಸಂದರ್ಭವಿದು ಎಂದು ತಿಳಿಸುತ್ತಾ ವಸುದೈವಕುಟುಂಬಕಂ, ವಿಶ್ವಮಾನವ ಪ್ರಜ್ಞೆಮತ್ತು ಇಂದಿನ ವಿಶ್ವಹಳ್ಳಿಯ ಪರಿಕಲ್ಪನೆಯನ್ನು ಸದಾ ನೆನಪಿನಲ್ಲಿ ಇರಿಸಿಕೊಂಡಿರಬೇಕು, ಎಂದು ತಿಳಿಸಿದರು. ಸ್ವಾತಂತ್ರ್ಯದ ಅಥವ ಸ್ವಚ್ಛಂದದ ಬದುಕನ್ನು ಅನುಭವಿಸಬೇಕಾದಲ್ಲಿ ಅದರ ಮತ್ತೂಂದು ಮಜಲಾದ ಜವದ್ದಾರಿ ಮತ್ತು ಕರ್ತವ್ಯವನ್ನು ನಿಸ್ಪೃಹವಾಗಿ ನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜೆ ಎಸ್ ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್ ಸೋಮಶೇಖರ್ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ನರಸಿಂಹನ್ ಅವರು ಉಪಸ್ಥಿತರಿದ್ದರು, ರಾಷ್ಟ್ರೀಯ ಹಬ್ಬಗಳ ಸಂಚಾಲಕರಾದ ಡಾ॥ ಎಸ್ ಶಂಕರಪ್ಪನವರು ಸ್ವಾಗತಿಸಿದರು, ಶೈಕ್ಷಣಿಕ ಡೀನ್ ಹಾಗೂ ಎನ್ ಸಿ ಸಿ ಅಧಿಕಾರಿಗಳಾದ ಪ್ರೊ. ಎಂ ಮಹದೇವಪ್ಪ ವಂದಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ ಎಸ್ ವೆಂಕಟರಾವ್ ಕಾರ್ಯಕ್ರಮವನ್ನು ನಿರೂಪಿಸಿದರು.

ಎಂ.ಬಿ. ಮಲ್ಲಿಕಾರ್ಜುನ ಪಂಡಿತ್
ಪ್ರಾಂಶುಪಾಲರು
ಜೆ.ಎಸ್.ಎಸ್.ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇ
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570025

ಗೆ
ಸಂಪಾದಕರು / ವರದಿಗಾರರು
- - - - - - - - - - - - - - -
- - - - - - - - - - - - - - -